ಕಳಪೆ ಕೆಲಸದ ಬಗ್ಗೆ ನಾನೊಬ್ಬನೇ ಅಲ್ಲ, ಈ ಸದನದಲ್ಲಿ ಮಾತನಾಡಿದಂತಹ ಎಲ್ಲಾ ಸದಸ್ಯರು ಹೇಳಿದರು, ಅದನ್ನು ಸರಿಪಡಿಸುತ್ತೇವೆಂದು ಹೇಳತಕ್ಕಂತಹ ಗೋಜಿಗೂ ಕೂಡ ತಾವು ಹೋಗಿಲ್ಲ. ಇವರು ಕೊಟ್ಟಂತಹ ಸ್ಟೇಟ್‌ಮೆಂಟ್ ಸರಿಯಿಲ್ಲ, ರೀಜನಲ್ ಇಂಬ್ಯಾಲೆನ್ಸ್‌ನ್ನು ತೆಗೆದುಹಾಕುವುದಕ್ಕೆ ಇವರು ತಯಾರಿಲ್ಲ. ಎಲ್ಲೆಲ್ಲಿ ಅನ್ಯಾಯವಾಗಿದೆ ಅದನ್ನು ಸರಿಪಡಿಸುವುದಕ್ಕೂ ಕೂಡ ತಯಾರಿಲ್ಲ. ಆ ಧೋರಣೆಯನ್ನು ಪ್ರತಿಭಟಿಸಿ ನಾವು ವಾಕ್‌ಔಟ್ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲಾ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎನ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಸರ್ಕಾರ ಕೊಟ್ಟಿರುವಂತಹ ಉತ್ತರ ಪ್ರಾಯಶಃ ಅವರಿಗೂ ಕೂಡ ಸಮಾಧಾನವನ್ನು ತರುವುದಕ್ಕೆ ಸಾಧ್ಯವಿಲ್ಲ. ಈ ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರ್ ಅಂಡ್ ರೂರಲ್ ಡೆವಲಪ್‌ಮೆಂಟ್‌ನಿಂದ ಏನು ಆಗಬೇಕಾಗಿತ್ತೋ ಅದು ಆಗಲಿಲ್ಲ. ರೂರಲ್ ಡೆವಲಪ್‌ಮೆಂಟ್ ಕೂಡ ಆಗಿಲ್ಲ, ಅಗ್ರಿಕಲ್ಚರ್ ಕೂಡ ಆಗಿಲ್ಲ, ಕೆಲವು ಕಂಟ್ರಾಕ್ಟರ್ಸ್‌ಗಳಿಗೆ ಡೆವಲಪ್‌ಮೆಂಟಾಯಿತು. ನಬಾರ್ಡ್‌ನ ಮೂಲಉದ್ದೇಶಕ್ಕೆ ತಿಲಾಂಜಲಿಯನ್ನು ಕೊಟ್ಟಿದ್ದಾರೆ. ಗುಣಮಟ್ಟದ ಬಗ್ಗೆ ಸ್ವಲ್ಪ ಕಾಳಜಿಯನ್ನೂ ವಹಿಸಲಿಲ್ಲ. ಈಗ ಸ್ವಲ್ಪ ಹೊತ್ತಿನಲ್ಲಿ ಆಂಧ್ರ ಪ್ರದೇಶದ ಉದಾಹರಣೆಯನ್ನು ಮಾನ್ಯ ವಿರೋಧಪಕ್ಷದ ನಾಯಕರು ಕೊಟ್ಟರು. ನಮ್ಮ ರಾಜ್ಯದ್ದು ಡೆವಲಪ್‌ಮೆಂಟ್ ಆಗಿಲ್ಲ, ರಾಜ್ಯದ ಮರ್ಯಾದೆ ಗೌರವ ಕೂಡ ಜಾಸ್ತಿಯಾಗಲಿಲ್ಲ ಈ ರೀತಿ ಕಳಪೆ ಗುಣಮಟ್ಟವನ್ನು ಸಮರ್ಥಿಸಿ, ಆ ಕ್ಷೇತ್ರಕ್ಕೆ ಏನು ಪಕ್ಷಪಾತವನ್ನು ಮಾಡಿದ್ದಾರೆ ಅದನ್ನು ಸಮರ್ಥಿಸಿ ಸರ್ಕಾರದವರು ಏನು ಉತ್ತರವನ್ನು ಕೊಟ್ಟಿದ್ದಾರೆ ಅದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಪಕ್ಷದ ಎಲ್ಲಾ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ :— ಸನ್ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರವನ್ನು ಬಹಳ ಗಂಭೀರವಾಗಿ ಕೇಳುತ್ತಿದ್ದೇನೆ. ಕ್ಷೇತ್ರವಾರು ಕೊಟ್ಟಿರುವುದರಲ್ಲಿ ಬಹಳ ಅನ್ಯಾಯ ನಡೆದಿದೆ ಎಂದು ನನಗನ್ನಿಸುತ್ತದೆ. ಅನೇಕ ಕ್ಷೇತ್ರಗಳಲ್ಲಿ ಸಮಾನವಾಗಿ, ಸಮಗ್ರವಾಗಿ ಹಂಚಿಕೆಯಾಗಿಲ್ಲ, ಯಾವ ಉದ್ದೇಶಕ್ಕೋಸ್ಕರವಾಗಿ ನಾವು ನಬಾರ್ಡ್ ಯೋಜನೆಯನ್ನು ತಂದಿದ್ದೇವೆ, ಆ ಉದ್ದೇಶ ಈಡೇರಲಿಲ್ಲ. ಕ್ಷೇತ್ರಗಳಲ್ಲಿ ಬಹಳ ತಾರತಮ್ಯ ನಡೆದಿದೆ, ಇದನ್ನು ನಾನು ವಿರೋಧಿಸಿ ಧರಣಿ ಮಾಡುತ್ತಿದ್ದೇವೆ.

(ಈಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಹೂಡಲು ಸದನದ ಬಾವಿಗೆ ಬಂದರು.)

ಅಧ್ಯಕ್ಷರು :— ಈಗ ಸದನವನ್ನು ಮಧ್ಯಾಹ್ನ 3-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.